ಅನಸೂಯ ಕಾಂಬಳೆ

# ಸಹಶೋಷಿತರ ವಿಮೋಚನೆಗಾಗಿ ಹೋರಾಡಬೇಕು

**1** ಬಸವಲಿಂಗಪ್ಪನವರ 'ಬೂಸಾ' ಚಳವಳಿಯ ಕಾಲದಲ್ಲಿದ್ದ ಆ ಭಾವನೆ ನೀಗಿದ ಸಂತೃಪ್ತ ಭಾವ ಇದೆ. ಅದುವರೆಗಿನ ಸಾಹಿತ್ಯದಲ್ಲಿ ದಲಿತ ಸಂವೇದನೆ ಇತ್ತು, ಅನುಭವ ಇರಲಿಲ್ಲ. (ಕೆಲವು ಮಿತಿಗಳಲ್ಲಿ ವಚನ ಸಾಹಿತ್ಯ ಹೊರತುಪಡಿಸಿ). ಅಷ್ಟೇ ಅಲ್ಲ ದಲಿತರ ಜನಪದ ಲೋಕವೇ ಮರೆಯಾಗಿತ್ತು. ಎಪ್ಪತ್ತರ ದಶಕದ ದಲಿತ ಸಾಹಿತ್ಯದಲ್ಲಿ ದಲಿತ ಜನಪದ ಲೋಕ ನವಿಲು ಗರಿಬಿಚ್ಚಿದ ಹಾಗೆ ತೆರೆದುಕೊಂಡಿದೆ. ದಲಿತ ಸಾಹಿತ್ಯದ ಕುರಿತು ಪಿಎಚ್.ಡಿ. ಸಂಶೋಧನಾ ಪ್ರಬಂಧಗಳು ಹೆಚ್ಚಿನ ಸಂಖ್ಯೆಯಲ್ಲಿ ಬಂದಿವೆ, ಬರುತ್ತಲೂ ಇವೆ. ದಲಿತ ಸಾಹಿತ್ಯ ಬರೀ ಸಾಹಿತ್ಯಿಕವಾಗಿ ಮಾತ್ರವೇ ಮೂಡಿಬರದೆ ಅನುಭವ ಜನ್ಯ ಚಳವಳಿಯ ಕ್ರಿಯಾತ್ಮಕ ಅಭಿವ್ಯಕ್ತಿಯಿಂದ ಮೂಡಿ ಬಂದಿದೆ.

**2** ಸಾಮಾಜಿಕ ಜಾತಿ ವ್ಯವಸ್ಥೆಯ ಇಂಡಿಯಾದಲ್ಲಿ ದಲಿತ ಜಗತ್ತೇ ಪ್ರತ್ಯೇಕವಾಗಿ ಗುರುತಿಸಿಕೊಂಡಿರುವುದರಿಂದ ದಲಿತ ಸಾಹಿತ್ಯ ಪ್ರತ್ಯೇಕವಾಗಿ ಗುರುತಿಸಿಕೊಳ್ಳಲು ಯಾವ ಸಂಕೋಚವು ಇರದು. ಏಕೆಂದರೆ ಭಾರತದ ಬಹುವಿಧ ಅಂತಃಕರಣ ಮತ್ತು ಮಾನವೀಯ ಸೆಲೆ ಹಾಗೂ ಜೀವನ ವಿಧಾನವಿರುವುದೇ ದಲಿತ ಸಮುದಾಯಗಳಲ್ಲಿ ಜನಪದ ಕಲೆ, ಸಾಹಿತ್ಯವೆಲ್ಲ ಬಹುತೇಕ ದಲಿತರಿಂದ ಸೃಜನಾತ್ಮಕವಾಗಿ ಕಟ್ಟಲ್ಪಟ್ಟಿದೆ.

**3** ದಲಿತ ಚಳುವಳಿ ಮತ್ತು ದಲಿತ ಸಾಹಿತ್ಯ ಹುಟ್ಟಿಕೊಂಡಾಗ ನಕಾರಾತ್ಮಕ ವಿಮರ್ಶೆ ಎದ್ದು ಕಾಣುತ್ತಿತ್ತು. ಈಗ ನಿಜವಾದ ಅಂತಃಕರಣದಿಂದ ಕೂಡಿದ ಸೃಜನಾತ್ಮಕ ಕಲೆ ಇರುವ ಸಾಹಿತ್ಯವು ದಲಿತ ಸಾಹಿತ್ಯವೇ ಆಗಿರುವುದರಿಂದ ವಿಮರ್ಶೆ ಇತ್ತೀಚೆಗೆ ದಲಿತ ಸಾಹಿತ್ಯವನ್ನು ವಿಭಿನ್ನವಾಗಿ ನೋಡಲು ಹವಣಿಸುತ್ತಿದೆ. ಒಂದರ್ಥದಲ್ಲಿ ವಿಮರ್ಶಾ ಲೋಕ ತನ್ಮಯವಾಗಿ ದಲಿತ ಸಾಹಿತ್ಯವನ್ನು ಗಮನಿಸುತ್ತಿದೆ.

**4** ಈ ಪ್ರಶ್ನೆಗೆ ಉತ್ತರ ಕೊಡುವುದೇ ಕಷ್ಟ. ಏಕೆಂದರೆ ಈ ದಶಕದಲ್ಲಿ ಬಂದ ದಲಿತ ಕೃತಿಗಳು ಒಂದಕ್ಕಿಂತ ಒಂದು ಶ್ರೇಷ್ಠ ಕೃತಿಗಳೇ ಆಗಿವೆ. ಒಂದೇ ಕೃತಿ ಆಯ್ದುಕೊಳ್ಳುವುದು ಕಷ್ಟ. ಪ್ರಾರಂಭದಲ್ಲಿ ಬಂದ ದಲಿತ ಕೃತಿಗಳಲ್ಲಿ ಪ್ರತಿಭಟನೆ ಮತ್ತು ಆವೇಶ ಹೆಚ್ಚಾಗಿದ್ದು,